ಎದುರು ವಿವೇಕಾನಂದರಿಗೆ ಈ ಭಾಷ್ಯಕಾರರೆಲ್ಲ ಕೇವಲ ಪಂಡಿತರಂತೆ ಕಂಡಿದ್ದರಲ್ಲಿ ಆಶ್ಚರ್ಯವಿಲ್ಲ. ೧೮೯೪ರಲ್ಲಿ ಸ್ವಾಮಿ ಶಿವಾನಂದರಿಗೆ ಬರೆದ ಪತ್ರವೊಂದರಲ್ಲಿ, "ಮೊದಲು ರಾಮಕೃಷ್ಣ ಪರಮಹಂಸರನ್ನು ಅರಿತುಕೊಳ್ಳದೆ ವೇದಗಳ, ವೇದಾಂತದ, ಭಾಗವತಾದಿ ಪುರಾಣಗಳ ನೈಜ ಆಂತರ್ಯವನ್ನು ಅರಿಯುವುದು ಸಾಧ್ಯವಿಲ್ಲ... ಅವರು ವೇದಗಳ ಜೀವಂತ ಭಾಷ್ಯವಾಗಿದ್ದರು... ನನ್ನ ಪಾಲಿಗೆ ಅವರ ಒಂದೊಂದು ಮಾತೂ ವೇದಗಳಿಗಿಂತ, ವೇದಾಂತಕ್ಕಿಂತ ತೂಕವುಳ್ಳದ್ದು" ಎಂದು ಹೇಳಿದ್ದಾರೆ. ಸಾಕಾರ ನಿರಾಕಾರಗಳಲ್ಲಿ ಭೇದವಿಲ್ಲ, ಅವೆರಡೂ ಒಂದೇ ಸತ್ಯದ ಎರಡು ರೂಪಗಳು ಎಂದು ಸಾರಿದ್ದೇ ವೇದಾಂತಕ್ಕೆ ಶ್ರೀರಾಮಕೃಷ್ಣರ ಕೊಡುಗೆ ಎಂಬುದು ಈಗ ಜನಸಾಮಾನ್ಯರಿಗೂ ತಿಳಿದಿರುವ ಸಂಗತಿ.

ಸ್ವಾಮಿ ವಿವೇಕಾನಂದರ ಮೇಲೆ ರಾಮಾನುಜರ ವಿಶಿಷ್ಟಾದ್ವೈತವು ವಿಶೇಷ ಆಕರ್ಷಣೆ ಬೀರಿತು ಎಂದು ಧಾರಾಳವಾಗಿ ಹೇಳಬಹುದು. ಶ್ರೀರಾಮಕೃಷ್ಣರಿಗೆ ಅದ್ವೈತದ ನಿರ್ವಿಕಲ್ಪ ಸಮಾಧಿ ಸಿದ್ಧಿಸಿತ್ತು; ವಿವೇಕಾನಂದರೂ ಅಧ್ಯಾತ್ಮಜೀವನದ ಪರಮಗುರಿ ಅದೇ ಎಂದುಕೊಂಡಿದ್ದರು. ಆದರೆ ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನೆಲ್ಲಾ ಈ ಯುಗದ ಧರ್ಮವೆಂದು ಹೇಳಿ ಭಕ್ತಿಪಂಥಕ್ಕೇ ಸೆಳೆದು ತಂದರು. ಅಲ್ಲದೆ ಮಾನವ ಪ್ರಪಂಚವನ್ನು ಗೌರವಿಸಿ, ಮಾನವೀಯ ವೇದಾಂತದೃಷ್ಟಿಯ ಮೂಲಕ ಮಾನವ ಸೇವೆಯನ್ನು ಮಾಡುವ ಮಹತ್ತರ ಕೆಲಸವನ್ನು ತಮ್ಮ ಪ್ರಿಯಶಿಷ್ಯ ನರೇಂದ್ರನಿಗೆ ವಹಿಸಿದರು. ಬೌದ್ಧಿಕರಾದ ಶಂಕರರಿಗೆ ರಾಮಾನುಜರ ಹೃದಯವಿಲ್ಲವೆಂದು ವಿವೇಕಾನಂದರು ಹೇಳಿದುದೂ ಈ ಮಾನವೀಯ ವೇದಾಂತದೃಷ್ಟಿಯಿಂದಲೇ.

ತನ್ನನ್ನು ತಾನು ಪ್ರಪಂಚದಲ್ಲಿ ತೊಡಗಿಸಿಕೊಂಡಿರುತ್ತಲೇ ಪರಬ್ರಹ್ಮನಿಗೆ ಪ್ರಾರ್ಥನೆ ಸಲ್ಲಿಸಿದರೆ, ಅದು ಒಂದೋ ರಾಮಾನುಜರ ಭಕ್ತಿಯಾಗುವುದು, ಇಲ್ಲವೇ ಕಿವಿಗೊಡದ ನಿರ್ಗುಣನಿಗೆ ಸಲ್ಲಿಸಿದ ವ್ಯರ್ಥ ಪ್ರಾರ್ಥನೆಯಾಗುವುದು. ಸಗುಣ ದೇವರಲ್ಲಿ ನಂಬಿಕೆಯನ್ನಿರಿಸುವುದು ಔನ್ನತ್ಯದಲ್ಲಿ ಕಡಿಮೆಯೆಂದು ಭಾವಿಸುವುದಾದರೆ, ಈ ಕೀಳ್ತನ ಒಂದು ಅನುಗ್ರಹವೆಂದೇ ರಾಮಾನುಜರು ಭಾವಿಸಿಯಾರು. ಜಗತ್ತು ಸತ್ಯವೆಂದು ನಂಬುವ ಅವರೊಬ್ಬ ಮಾನವೀಯ ಅನುಕಂಪವುಳ್ಳ ವೇದಾಂತಿ. ತನ್ನ ದೇಶದ ಹಾಗೂ ಇಡೀ ಪ್ರಪಂಚದ ನೈತಿಕ–ಆಧ್ಯಾತ್ಮಿಕ ಪುನರುಜ್ಜೀವನಕ್ಕಾಗಿ ದುಡಿದ ವಿವೇಕಾನಂದರು ಪ್ರತಿಪಾದಿಸಿದುದು ಈ ಮಾನವೀಯ ವೇದಾಂತವನ್ನೇ. ತಮ್ಮ Modern Indian Thought ಎಂಬ ಗ್ರಂಥದಲ್ಲಿ ಪ್ರೊಫೆಸರ್ ವಿ. ಎಸ್. ನರವಣೆಯವರು, "ಭಾರತೀಯ ಧಾರ್ಮಿಕ ಪರಂಪರೆಯನ್ನು ವಿವೇಕಾನಂದರು ಶಂಕರಾಚಾರ್ಯರ ನಿರಾಕಾರ ನಿರಪೇಕ್ಷದ, ರಾಮಾನುಜರ ಭಕ್ತಿಮಾರ್ಗದ ಹಾಗೂ ಬೌದ್ಧರ ಮಾನವೀಯತೆಯ ಸಮನ್ವಯವೆಂದು ಭಾವಿಸಿದ್ದರು" ಎಂದಿದ್ದಾರೆ. ಎಲ್ಲರಿಗಾಗಿ ಅನುಷ್ಠಾನ ವೇದಾಂತ ಎನ್ನುವಾಗ ಅವರು ರಾಮಾನುಜರನ್ನು ನೆನೆಯುತ್ತ, 'You may mark one characteristic since the time of Ramanuja - the opening of the door of spirituality to everyone. That has been the watchword of all prophets since Ramanuja" (ಎಲ್ಲರಿಗಾಗಿ ಅಧ್ಯಾತ್ಮದ ಬಾಗಿಲನ್ನು ತೆರೆದ ರಾಮಾನುಜರ ಗುಣವಿಶೇಷವನ್ನು ನೀವು ಗಮನಿಸಬೇಕು. ಅಲ್ಲಿಂದ ಮುಂದಿನ ಪ್ರವಾದಿಗಳೆಲ್ಲರೂ ಅದನ್ನು ಮುಂದುವರೆಸಿಕೊಂಡು ಬಂದರು) ಎನ್ನುತ್ತಾರೆ. "ಪ್ರಕೃತಿಯ ಬಗ್ಗೆ ವಿವೇಕಾನಂದರ ಕಲ್ಪನೆ ನವವಿಜ್ಞಾನದ ಪ್ರಕೃತಿಚಿತ್ರಕ್ಕಿಂತ ತುಂಬ ಭಿನ್ನವೇನಲ್ಲ; ಆದ್ದರಿಂದಲೇ ಆ ನವೀನ ವೇದಾಂತವನ್ನು ನಾನು ನಂಬುವೆ" ಎಂದಿರುವ ರೋಮಾ ರೋಲಾ, 'ರಾಮಾನುಜರ ಲೋಕದೃಷ್ಟಿಯನ್ನು ಅವರು ಒಪ್ಪಿದ್ದರಿಂದಲೇ ಇದು ಸಾಧ್ಯವಾಯಿತು' ಎಂದೂ ಸೇರಿಸಬಹುದಿತ್ತು. ಹೀಗೆಂದಮೇಲೆ ಈ ಕರ್ಮಯೋಗಿ ವೇದಾಂತಿಯು ರಾಮಾನುಜರ ಅನುಯಾಯಿಯಾಗಿರಲೇಬೇಕು.

✶

## ಒಂದು ಮನವಿ

ಶ್ರೀಮತ್ ಸ್ವಾಮಿ ಯತೀಶ್ವರಾನಂದಜಿ ಮಹಾರಾಜ್ (೧೮೮೯–೧೯೬೬) ಮತ್ತು ಶ್ರೀಮತ್ ಸ್ವಾಮಿ ತಪಸ್ಯಾನಂದಜಿ ಮಹಾರಾಜ್ (೧೯೦೪–೧೯೯೧) – ಇವರಿಬ್ಬರೂ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದ ಮಹಾನುಭಾವರುಗಳು. ಚೆನ್ನೈ ಶ್ರೀರಾಮಕೃಷ್ಣ ಮಠವು ಇವರಿಬ್ಬರ ನೆನಪುಗಳನ್ನು ಒಳಗೊಂಡ ಎರಡು ಪ್ರತ್ಯೇಕ ಸ್ಮರಣಗ್ರಂಥಗಳನ್ನು ಸದ್ಯದಲ್ಲಿಯೇ ಪ್ರಕಟಿಸುತ್ತಿದೆ. ಅದಕ್ಕಾಗಿ ಭಕ್ತರು ಮತ್ತು ಹಿತೈಷಿಗಳಿಂದ ಅವರಿಬ್ಬರ ಸ್ಮರಣಿಕೆಗಳನ್ನು ಸಂಗ್ರಹಿಸುವ ಕಾರ್ಯ ನಡೆಯುತ್ತಿದೆ. ಈ ಕಾರ್ಯದಲ್ಲಿ ನೆರವಾಗುವಂತೆ, ಈ ಇಬ್ಬರು ಪೂಜನೀಯರಿಂದ ಮಂತ್ರದೀಕ್ಷೆಯನ್ನು ಪಡೆದ ಅಥವಾ ಅವರ ಜೊತೆಗೆ ಸಂಪರ್ಕವಿದ್ದ ನಮ್ಮೆಲ್ಲ ಭಕ್ತರು, ಸ್ನೇಹಿತರು ಮತ್ತಿತರರು, ತಮ್ಮಲ್ಲಿ ಇರಬಹುದಾದ ಸ್ಮರಣೆಗಳು, ಪತ್ರಗಳು ಮತ್ತು ಛಾಯಾಚಿತ್ರಗಳನ್ನು, ಈ ಪುಸ್ತಕಗಳಲ್ಲಿ ಅಡಕಗೊಳಿಸುವುದಕ್ಕಾಗಿ, ಕಳಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಇವುಗಳನ್ನು ಇ–ಮೇಲ್ ಅಥವಾ ಅಂಚೆಯ ಮೂಲಕ ೩೦ ಜೂನ್ ೨೦೧೩ರ ಒಳಗೆ ತಲುಪುವಂತೆ, ಈ ಕೆಳಗಿನ ವಿಳಾಸಕ್ಕೆ ಕಳಿಸಿಕೊಡಬೇಕಾಗಿ ಪ್ರಾರ್ಥನೆ :

**The Manager, Sri Ramakrishna Math, R. K. Math Road,**
**Mylapore, Chennai - 600004, Tamilnadu ; E- mail : mail@chennaimath.org**